ಪಿ.ಡಬ್ಲ್ಯೂ 2

ದಿನಾಂಕ : 03-08-2018

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿ: 03-08-2018.

ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ವಕೀಲರಾದ ಶ್ರೀ ಕೆ.ಎನ್.ಆರ್.ರವರಿಂದ :

ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ವಿಷಯಗಳೆಲ್ಲವು ಸತ್ಯವಾಗಿರುತ್ತದೆ.

ಪಾಟೀಸವಾಲು 1 ಮತ್ತು 2ನೇ ಪ್ರತಿವಾದಿಯರ ಪರ ವಕೀಲರಾದ ಶ್ರೀ ಜಿ.ಸಿ.ಜಿ.ರವರಿಂದ :

ನಾನು ಬಾವಿಹಳ್ಳಿಯಲ್ಲಿ ವಾಸವಾಗಿದ್ದೇನೆಂದರೆ ಸಾಕ್ಷಿಯು ನಾನು ಕೊಂಗನಹೊಸೂರು ಗ್ರಾಮದಲ್ಲಿ ವಾಸವಾಗಿದ್ದೇನೆ ಎಂದು ನುಡಿಯುತ್ತಾರೆ. ನಾನು ಮತ್ತು ವಾದಿಯು ಆತ್ಮೀಯ ಸ್ನೇಹಿತರು ಎಂದರೆ ಸರಿ. ಕೊಂಗನಹೊಸೂರು ಗ್ರಾಮದಲ್ಲಿ ಜಮೀನುಗಳಿಗೆ ಹೋಗುವಂತಹ ದಾರಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ದಾವಾ ಸ.ನಂ.ನಲ್ಲಿ ಒಟ್ಟು 8 ಎಕರೆ 41 ಸೆಂಟ್ಸ್ ಜಮೀನಿದೆ. ಸದರಿ ಸ್ವತ್ತು ಮೂಲತಃ ಚಂದ್ರಗೌಡ ಎನ್ನುವವರಿಗೆ ಸೇರಿತ್ತು, ಸದರಿಯವರಿಗೆ 4 ಜನ ಮಕ್ಕಳು. ಅವರ ಒಟ್ಟು ಕುಟುಂಬಕ್ಕೆ 8 ಎಕರೆ 41 ಸೆಂಟ್ಸ್ ಆಸ್ತಿ ಮಾತ್ರ ಇತ್ತು. ಸದರಿ 4 ಜನ ಮಕ್ಕಳಲ್ಲಿ ಒಬ್ಬರು ಹಿರಿಯವರು ಬೇರ ಆಗಿದ್ದು ಉಳಿದ 3 ಮಂದಿ ಒಟ್ಟಿಗೆ ಇದ್ದಾಗೆ. ಸದರಿಯವರು ಯಾವಾಗ ಬೇರೆ ಆಗಿರುತ್ತಾರೆಂದು ನನಗೆ ಗೊತ್ತಿಲ್ಲ. ಆ ರೀತಿಯಾದ ಬಗ್ಗೆ ಉಪನೋಂದಣಾಧಿಕಾರಿ ಕಛೇರಿಯಲ್ಲಿ ನೋಂದಾಯಿತ ಪಾಲುಪಟ್ಟಿ ಆಗಿದೆಯೋ ಇಲ್ಲವೋ ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಯು ಬೇರೆ ಆಗಿರುತ್ತೇನೆಂದು ಹೇಳಿರುವ ಕಾರಣ ನಾನು ಹಾಗೆಯೇ ಹೇಳಿರುತ್ತೇನೆಂದರೆ ಸರಿ.

2. ಮುಸುಕಿನ ಕಲ್ಲಹಳ್ಳಿ ಗ್ರಾಮವನ್ನು ತಲುಪಲು ಸ.ನಂ. 59, 58, 17 , 18 ಇನ್ನೂ ಕೆಲವು ಸ.ನಂ.ಗಳು ನೆನಪಿಲ್ಲವೆಂದು ಸಾಕ್ಷಿಯು ನುಡಿದಿದ್ದು ಮುಂದುವರೆದು ಒಟ್ಟಿನಲ್ಲಿ ಸದರಿ ಸ.ನಂ.ಗಳ ಮೂಲಕ ದಾರಿ ಇದೆ ಎಂದು ನುಡಿಯುತ್ತಾರೆ. ಗ್ರಾಮ ನಕಾಶೆಯನ್ನು ನಾನು ಸ್ವಲ್ಪ ದಿನಗಳ ಕೆಳಗೆ ಅಂದರೆ 2-3 ತಿಂಗಳ ಹಿಂದೆ ನೋಡಿರುತ್ತೇನೆ. ಗ್ರಾಮ ನಕಾಶೆಯ ಪ್ರತಿಯನ್ನು ನಾನು ತರಿಸಿದ್ದೆ. ನನಗೆ ಸೇರಿದ ಜಮೀನಿನಲ್ಲಿ ದಾರಿಯ ಬಗ್ಗೆ ಯಾವುದೇ ವಿವಾದ ಇಲ್ಲ. ಕುತೂಹಲಕ್ಕೋಸ್ಕರ ಗ್ರಾಮ ನಕಾಶೆಯನ್ನು ತೆಗೆಸಿದ್ದೆ. ಅದರ ಪ್ರತಿ ನನ್ನ ಬಳಿ ಇದೆ. ಕುತೂಹಲಕ್ಕೋಸ್ಕರ ಗ್ರಾಮ ನಕಾಶೆಯನ್ನು ತೆಗೆಸಿದ್ದೆ ಎಂದ ಕಟ್ಟುಕತೆಯೆಂದು ಈ ಕೇಸಿಗೋಸ್ಕರ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ.ನಂ. ಒಟ್ಟು ಜಮೀನಿನ ಚೆಕ್ಕುಬಂದಿ ನನಗೆ ಗೊತ್ತು, ಪೂರ್ವಕ್ಕೆ ಗಾಳೆಮ್ಮನ ಜಮೀನು,

ಪಿ.ಡಬ್ಲೂ 2

ದಿನಾಂಕ : 03-08-2018

ಪಶ್ಚಿಮಕ್ಕೆ ಪಾಟೀಲ್ ಚನ್ನನಗೌಡರ ಜಮೀನು, ಉತ್ತರಕ್ಕೆ ಬಾವಿಹಳ್ಳಿ ಗಂಗಮ್ಮನ ಜಮೀನು, ದಕ್ಷಿಣಕ್ಕೆ ನನ್ನದೇ ಜಮೀನು ಇದೆ. ಸ.ನಂ. 57 ರಲ್ಲಿ 8 ಎಕರೆ 41 ಸೆಂಟ್ಸ್‌ಗೆ ಜಮೀನಿನ ಪೂರ್ವಕ್ಕೆ ಮೊದಲು ಮುದಿಯಪ್ಪನ ಹೊಲ ಬರುತ್ತದೆ ಎಂದರೆ ಸರಿ. ಆತನ ಹೊಲದ ಸ.ನಂ. ನನಗೆ ನೆನಪಿಲ್ಲ.

3. ಸ.ನಂ. 57 ರಲ್ಲಿ ಒಟ್ಟು ವಿಸ್ತೀರ್ಣ 10 ಎಕರೆ 41 ಸೆಂಟ್ಸ್ ಜಮೀನು ಇದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅದರ ಪೈಕಿ 8 ಎಕರೆ 41 ಸೆಂಟ್ಸ್ ಜಮೀನು ಚಂದ್ರಗೌಡನಿಗೆ ಸೇರಿದ್ದು 2 ಎಕರೆ ಜಮೀನು ಮುದಿಯಪ್ಪನಿಗೆ ಸೇರಿದ್ದು ಎಂದರೆ ಸರಿ. ಮುದಿಯಪ್ಪ ಮತ್ತು ಗಾಳೆಮ್ಮ ಇವರ ಜಮಿನುಗಳಿಗೆ 8 ಎಕರೆ 41 ಸೆಂಟ್ಸ್ ಜಮೀನಿನ ಮೂಲಕವೇ ಹೋಗುತ್ತಾರೆಂದರೆ ಸರಿ. ಗಾಳೆಮ್ಮನ ಜಮೀನಿನ ದಕ್ಷಿಣಕ್ಕೆ 1ನೇ ಪ್ರತಿವಾದಿಯ ಜಮೀನಿದೆ ಎಂದರೆ ಸರಿ. ಮುದಿಯಪ್ಪ ಮತ್ತು ಗಾಳೆಮ್ಮನ ಹೊಲದ ಮೂಲಕವೇ 1ನೇ ಪ್ರತಿವಾದಿಯು ಆತನ ಜಮೀನಿಗೆ ಹೋಗುತ್ತಾನೆಂದರೆ ಸರಿಯಲ್ಲ. ಅದೇ ರೀತಿ ಆತನ ಜಮೀನಿಗೆ 8 ಎಕರೆ 41 ಸೆಂಟ್ಸ್ ಜಮೀನಿನ ಮೂಲಕವೇ ಹೋಗುತ್ತಿದ್ದಾನೆ ಎಂದರೆ ಸರಿಯಲ್ಲ. ಕೊಂಗನಹೊಸೂರು ಗ್ರಾಮದಿಂದ ಕೆಂಚಮ್ಮನಹಳ್ಳಿಗೆ ಹೋಗಲು ದಾರಿ ಇದ್ದು ಸದರಿ ದಾರಿಯು ಯಾವ ಸ.ನಂ.ನ ಮೂಲಕ ಹಾದು ಹೋಗುತ್ತದೆ ಎಂದು ಹೇಳಲು ನನಗೆ ಈಗ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆದಿರುಗವ ಸ.ನಂ.ಗಳನ್ನು ಗ್ರಾಮ ನಕಾಶೆಯಲ್ಲಿ ನೋಡಿ ಬರೆಯಿಸಿರುತ್ತೇನೆ. ನಾನು ಹೇಳಿದ ಗ್ರಾಮ ನಕಾಶೆಯಲ್ಲಿ ದಾರಿ ಇಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯು ಆತ್ಮೀಯರಾಗಿರುವುದರಿಂದ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1ನೇ ಪ್ರ2ವಾದಿಯು 8 ಎಕರೆ 41 ಸೆಂಟ್ಸ್ ಜಮೀನು ಮುದಿಯಪ್ಪನ ಮತ್ತು ಗಾಳೆಮ್ಮನ ಜವೀನಿನ ಮೂಲಕ ಜಮೀನಿಗೆ ಹೋಗುವುದನ್ನು ನೋಡಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

3 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಸಿವಿಲ್ ಜಡ್ಜ್ , ಹರಪನಹಳ್ಳಿ.

'ಒ.ಎಸ್.102/2011

ಪಿ.ಡಬ್ಲೂ 2

ದಿನಾಂಕ : 03-08-2018